# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 79

ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 17-09-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ವಾಹನಗಳಲ್ಲಿ ಯಾವ ರೀತಿಯ ದೀಪಗಳನ್ನು ಅಳವಡಿಸಬೇಕು ಎಂಬುದಕ್ಕೆ ಸರ್ಕಾರಿ ಆದೇಶವೇನಾದರೂ ಇದೆಯೇ? ಇದ್ದಲ್ಲಿ ಅದರ ಆದೇಶದ ಪ್ರತಿಯನ್ನು ಒದಗಿಸುವುದು; | ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 105ರಡಿ ನಿಗದಿ ಪಡಿಸಿರುವಂತೆ ಸಾರ್ವಜನಿಕ ರಸ್ತೆಯ ಮೇಲೆ ಚಲಾಯಿಸುವಂತಹ ಯಾವುದೇ ವಾಹನವು ಸೂರ್ಯಾಸ್ತಮದ ಅರ್ಧ ತಾಸಿನ ನಂತರ ಮತ್ತು ಸಾಕಷ್ಟು ಬೆಳಕು ಇಲ್ಲದ ಯಾವುದೇ ಸಂದರ್ಭಗಳಲ್ಲಿ 155 ಮೀಟರ್‌ಗಳ ವ್ಯಾಪ್ತಿಯಷ್ಟು ಬೆಳಕನ್ನು ಹೊರ ಸೂಸುವ ಮತ್ತು ರಸ್ತೆಯ ಮೇಲೆ ಸಂಚರಿಸುವ ವಾಹನ ಮತ್ತು ವ್ಯಕ್ತಿಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವಂತಹ ಹೆಡ್‌ಲೈಟ್ (ಲ್ಯಾಂಪ್)ಗಳನ್ನು ವಿವಿಧ ವರ್ಗದ ವಾಹನಗಳಿಗೆ ಅಳವಡಿಸಿರಬೇಕಾಗುತ್ತದೆ ಹಾಗೂ ಸದರಿ ನಿಯಮದ ಉಪ ನಿಯಮ (2)ರಲ್ಲಿ ಇತರೆ ಉಪಬಂಧಗಳನ್ನು ನಿಗದಿ ಪಡಿಸಲಾಗಿದೆ.<br><br>ವಾಹನಗಳಲ್ಲಿ ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸುವುದರಿಂದ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗಿ ಅಪಘಾತವಾಗುವ ಸಂಭವವಿರುವ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸುರಕ್ಷತೆಯ ಸಲುವಾಗಿ ಬೆಂಗಳೂರು ನಗರದ ರಸ್ತೆಗಳಲ್ಲಿ ಲೋ ಬೀಮ್ ಲೈಟ್‌ಗಳನ್ನು ಮಾತ್ರ ಉಪಯೋಗಿಸಿ ವಾಹನ ಚಾಲನೆ ಮಾಡುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು ದಿನಾಂಕ:07-11-2003 ರಲ್ಲಿ ಅಧಿಸೂಚನೆ ಹೊರಡಿಸಿರುತ್ತಾರೆ. ( ಪ್ರತಿ ಅನುಬಂಧದಲ್ಲಿ ಲಗತ್ತಿಸಿದೆ) |

| | | |
|---|---|---|
| ಆ | ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿದೆಯೇ? ಇದ್ದಲ್ಲಿ ಅದರ ಮಾಹಿತಿಯನ್ನು ನೀಡುವುದು. ಹಲವು ವರ್ಷಗಳ ಹಿಂದೆ ದೊಡ್ಡ ವಾಹನಗಳ ದೀಪಗಳಿಗೆ ಪ್ರಖರತೆಯನ್ನು ತಗ್ಗಿಸಲು ಕಪ್ಪು ಬಣ್ಣವನ್ನು ಬಳಿಯುತ್ತಿದ್ದರು ಎಂಬುದರ ಬಗ್ಗೆ ವಿವರವನ್ನು ಒದಗಿಸುವುದು. | ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿರುವುದಿಲ್ಲ.<br><br>ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 105ರಡಿ ದೊಡ್ಡ ವಾಹನಗಳ ದೀಪಗಳಿಗೆ ಪ್ರಖರತೆಯನ್ನು ತಗ್ಗಿಸಲು ಕಪ್ಪು ಬಣ್ಣವನ್ನು ಹಚ್ಚುವ ಬಗ್ಗೆ ನಮೂದು ಇರುವುದಿಲ್ಲ. ಆದಾಗ್ಯೂ ಇತರೆ ವಾಹನಗಳಿಗೆ ದೀಪಗಳ ಪ್ರಖರತೆಯಿಂದ ಸಂಭವನೀಯ ಅಪಘಾತಗಳನ್ನು ತಪ್ಪಿಸಲು ಈ ಹಿಂದೆ ಅಂತಹ ವ್ಯವಸ್ಥೆಯನ್ನು ಹೊಂದಲಾಗಿತ್ತು. |
| ಇ | ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ. ದೀಪಗಳನ್ನು ಅಳವಡಿಸಿ ಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಮತ್ತು ಅಪಘಾತಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು (ವಿವರ ಒದಗಿಸುವುದು) | ವಾಹನಗಳಲ್ಲಿ ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ. ದೀಪಗಳನ್ನು ಉಪಯೋಗಿಸುವುದರಿಂದ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗಿ ಅಪಘಾತಗಳುವಾಗುವ ಸಂಭವವಿರುವ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಸುರಕ್ಷತೆಯ ಸಲುವಾಗಿ ವಾಹನಗಳಲ್ಲಿ ಎಲ್.ಇ.ಡಿ. ದೀಪಗಳನ್ನು ಉಪಯೋಗಿಸದಂತೆ ಅರಿವು ಮೂಡಿಸಲಾಗುತ್ತಿದೆ.<br><br>ಎಲ್.ಇ.ಡಿ. ದೀಪಗಳನ್ನು ಉಪಯೋಗಿಸಿ ನಿಯಮ ಉಲ್ಲಂಘಿಸಿದ ವಾಹನ ಚಾಲಕ/ಸವಾರರ ವಿರುದ್ಧ ಕೇಂದ್ರ ಮೋಟಾರು ವಾಹನಗಳ ನಿಯಮ 106 ಸಹಿತ ಮೋಟಾರು ವಾಹನ ಕಾಯ್ದೆ ಕಲಂ 177 ರಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.<br><br>ಪೊಲೀಸ್ ಇಲಾಖೆಯಿಂದ ಕಳೆದ 05 ವರ್ಷಗಳಲ್ಲಿ ರಾಜ್ಯಾದ್ಯಂತ ದಾಖಲಿಸಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ. |

| ವರ್ಷ | ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸುವ ವಾಹನಗಳ ವಿರುದ್ಧ ರಾಜ್ಯಾದ್ಯಂತ ದಾಖಲಿಸಿದ ಪ್ರಕರಣಗಳ ಸಂಖ್ಯೆ |
|---|---|
| 2016 | 30071 |
| 2017 | 28616 |
| 2018 | 13686 |
| 2019 | 7414 |
| 2020 | 2312 |
| 2021 (ಆಗಸ್ಟ್) | 8563 |

| | | |
|---|---|---|
| ಈ | ಕೆಲವು ವಾಹನಗಳಿಗೆ ಕೆಂಪು ಮತ್ತು ಹಳದಿ ಬಣ್ಣದ ಬದಲು, ನೀಲಿ ಬಣ್ಣದ ದೀಪಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದಕ್ಕೆ ಇಲಾಖೆ ತೆಗೆದುಕೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಿಂದ ಹೊರಡಿಸಿರುವ ಅಧಿಸೂಚನೆ ಸಂಖ್ಯೆ. ಜಿ.ಎಸ್.ಆರ್.423(ಇ) ಮತ್ತು ಎಸ್.ಒ.1374(ಇ) ದಿನಾಂಕ:01-05-2017 ರಲ್ಲಿನ ನಿಬಂಧನೆಗಳನುಸಾರ ರಾಜ್ಯ ಸಾರಿಗೆ ಇಲಾಖೆ ಹೊರಡಿಸಿದ ಆದೇಶ ಸಂ.ಸಾರಿಇ 114 ಸಾಇಪ 2017, ದಿನಾಂಕ:12-10-2017 ರಲ್ಲಿ, ಅಗ್ನಿ ಶಾಮಕ ಕರ್ತವ್ಯಗಳನ್ನು ನಿರ್ವಹಿಸುವ ವಾಹನಗಳ ಕಾನೂನು ನಿರ್ವಹಣೆಗೆ ಸಂಬಂಧಿಸಿದ ಪೊಲೀಸ್ ರಕ್ಷಣಾ ಪಡೆ ಅಥವಾ ಅರೆ ಸೇನಾಪಡೆ ಅಧಿಕಾರಿಗಳ ವಾಹನಗಳ ಮೇಲೆ ಕೆಂಪು, ನೀಲಿ ಮತ್ತು ಬಿಳಿ ಸೇರಿದಂತೆ ಬಹುವರ್ಣದ ದೀಪಗಳನ್ನು ಅಳವಡಿಸುವ ಕುರಿತು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ರವರಿಗೆ ಸಂಬಂಧಪಟ್ಟ ಇಲಾಖೆಗಳು ಕೋರಿಕೆಯನ್ನು ನೀಡಿದಲ್ಲಿ, ಅಂತಹ ಮನವಿಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಯ ಸರ್ಕಾರಿ ವಾಹನಗಳ ಮೇಲೆ ಬಹುವರ್ಣದ ದೀಪಗಳನ್ನು ಅಳವಡಿಸುವ ಕುರಿತು ಅನುಮತಿ ನೀಡಲು ಅವಕಾಶವಿರುತ್ತದೆ.<br>ಅದರಂತೆ, ಇಲಾಖೆಯು ಕೋರಿಕೆ ಸಲ್ಲಿಸಿದ ವಾಹನಗಳಿಗೆ ಅನುಮತಿ ನೀಡಲಾಗಿರುತ್ತದೆ. |

ಟಿಡಿ 97 ಟಿಡಿಕ್ಯೂ 2021

(ಬಿ. ಶ್ರೀರಾಮುಲು)
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು

## ಪೊಲೀಸ್ ಕಮೀಷನರ್‌ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

### ಅಧಿಸೂಚನೆ

**ಸಂಖ್ಯೆ: 631/ಸಂ.ವಿ/ಸಿ.ಓ.ಪಿ/2003, ದಿನಾಂಕ: 7ನೇ ನವೆಂಬರ್ 2003**

ಬೆಂಗಳೂರು ನಗರದ ಬಹಳಷ್ಟು ರಸ್ತೆಗಳಲ್ಲಿ ಸಾಕಷ್ಟು ಪ್ರಕಾಶಮಾನವಾದ ಬೀದಿ ದೀಪಗಳಿದ್ದು ರಾತ್ರಿ ವೇಳೆಯಲ್ಲಿ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸುವುದು ಅನಾವಶ್ಯಕವೆಂದು ಕಂಡುಬಂದಿದ್ದರಿಂದ ಹಾಗೂ ವಾಹನಗಳ ಹೆಡ್ ಲೈಟ್ ಉಪಯೋಗಿಸುವುದರಿಂದ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗಿ ಅಪಘಾತಗಳಾಗುವ ಸಂಭವವಿದ್ದ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸುರಕ್ಷತೆಯ ಸಲುವಾಗಿ ಬೆಂಗಳೂರು ನಗರದ ಈ ಕೆಳಕಂಡ ರಸ್ತೆಗಳಲ್ಲಿ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸುವುದನ್ನು ನಿರ್ಬಂಧಿಸಲಾಗಿತ್ತು.

1) ಏರ್‌ಪೋರ್ಟ್ ರಸ್ತೆ - ಏರ್ ಪೋರ್ಟ್ ನಿಂದ ಟ್ರಿನಿಟಿ ಚರ್ಚ್ ವೃತ್ತದವರೆಗೆ.
2) ಎಂ.ಜಿ. ರಸ್ತೆ - ಟ್ರಿನಿಟಿ ಚರ್ಚ್ ವೃತ್ತದಿಂದ ಕ್ವೀನ್ಸ್ ಸ್ಟ್ಯಾಚ್ಯೂ ವೃತ್ತದವರೆಗೆ.
3) ಕೆ.ಹೆಚ್. ರಸ್ತೆ - ದಲಾಲ್ ಪೆಟ್ರೋಲ್ ಬಂಕ್‌ನಿಂದ ಲಾಲ್‌ಬಾಗ್ ವೃತ್ತದವರೆಗೆ.
4) ಟ್ಯಾಂಕ್ ಬಂಡ್ ರಸ್ತೆ - ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ನಿಂದ ಗ್ರೇಡ್ ಸೆಪರೇಟಿಂಗ್ ಸೇತುವೆ.
5) ಟಿ. ಚೌಡಯ್ಯ ರಸ್ತೆ - ರಾಜಭವನ ಜಂಕ್ಷನ್‌ನಿಂದ ಕಾವೇರಿ ಚಿತ್ರಮಂದಿರದ ಜಂಕ್ಷನ್‌ವರೆಗೆ.
6) ಬಳ್ಳಾರಿ ರಸ್ತೆ - ಕಾವೇರಿ ಚಿತ್ರಮಂದಿರ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ.
7) ಹಳೇ ತುಮಕೂರು ರಸ್ತೆ - ಮೇಖ್ರಿ ವೃತ್ತದಿಂದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ವರೆಗೆ.
8) ಕ್ವೀನ್ಸ್ ರಸ್ತೆ - ಸಿ.ಟಿ.ಓ ವೃತ್ತದಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ.
9) ಆರ್.ವಿ. ರಸ್ತೆ - ಲಾಲ್ ಬಾಗ್ ಪಶ್ಚಿಮ ದ್ವಾರದಿಂದ ಸೌತ್ ಎಂಡ್ ಸರ್ಕಲ್‌ವರೆಗೆ.
10) ಜೆ.ಸಿ. ರಸ್ತೆ - ಮಿನರ್ವ ವೃತ್ತದಿಂದ ನರಸಿಂಹರಾಜ ಚೌಕದವರೆಗೆ.
11) ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಸುತ್ತಲೂ, 9ನೇ ಮುಖ್ಯ ರಸ್ತೆ, 30ನೇ ಕ್ರಾಸ್ ಪವಿತ್ರ ಹೋಟೆಲ್ ಜಂಕ್ಷನ್‌ನಿಂದ ಕೆನರಾ ಬ್ಯಾಂಕ್ ವೃತ್ತದವರೆಗೆ.

ಆದರೆ ಇದನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತಂದು ನೋಡಿದಾಗ ರಸ್ತೆಗಳಲ್ಲಿ ಅನೇಕ ಕಡೆ ಮರ ಮುಂತಾದವು ಹೆಚ್ಚಾಗಿದ್ದು ಅವುಗಳ ನೆರಳಿನಿಂದ ಬೆಳಕು ಮಂದವಾಗಿರುವುದರಿಂದ ವಾಹನಗಳನ್ನು ಚಾಲನೆ ಮಾಡುವುದು ಕಷ್ಟಸಾಧ್ಯವಾಗಿರುವುದು ಕಂಡು ಬಂತು.

ಹೆಚ್ಚಿನ ಅಧ್ಯಯನದಿಂದ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಲೋಬೀಮ್ ಲೈಟ್‌ಗಳನ್ನು ಉಪಯೋಗಿಸುವುದು ಅನಿವಾರ್ಯವಾಗಿರುತ್ತದೆಂಬುದು ಕಂಡುಬಂದಿದೆ.

ಆದ್ದರಿಂದ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸಿ ಚಾಲನೆ ಮಾಡುವುದನ್ನು ನಿರ್ಬಂಧಿಸಿ ದಿನಾಂಕ 20-9-2003ರಂದು ಹೊರಡಿಸಲಾಗಿದ್ದ ಅಧಿಸೂಚನೆಯನ್ನು ರದ್ದುಪಡಿಸಿ ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ ನನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಅಧಿಕಾರವನ್ನು ಚಲಾಯಿಸಿ, ಎಸ್. ಮರಿಸ್ವಾಮಿ, ಐ.ಪಿ.ಎಸ್. ಪೊಲೀಸ್ ಕಮಿಷನರ್, ಬೆಂಗಳೂರು ನಗರ ಆದ ನಾನು ಇಡೀ ಬೆಂಗಳೂರು ನಗರದ ರಸ್ತೆಗಳಲ್ಲಿ ಲೋಬೀಮ್ ಲೈಟ್‌ಗಳನ್ನು ಮಾತ್ರ ಉಪಯೋಗಿಸಿ ವಾಹನ ಚಾಲನೆ ಮಾಡುವಂತೆ ಆದೇಶಿಸಿರುತ್ತೇನೆ.

ಅಂತೆಯೇ ಕಲಂ 116 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್, 1960ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ಆದೇಶಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಆದೇಶಿಸಿರುತ್ತೇನೆ.

ಈ ಮೇಲ್ಕಂಡ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೊಳಿಸುವುದು.

ಈ ಆದೇಶವನ್ನು ನಾನು ದಿನಾಂಕ 7-11-2003 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

ಪಿ.ಆರ್. 4

ಎಸ್. ಮರಿಸ್ವಾಮಿ
ಪೊಲೀಸ್ ಕಮೀಷನರ್, ಬೆಂಗಳೂರು ನಗರ